ದಿಃ 10.08.2023.

O.S : 137/2022 PW.1

(ದಿಃ**10/08/2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಿಡಬ್ಲ್ಯೂ-1 ರವರ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ**

ನನ್ನ ತಂದೆ ಗೋವಿಂದಪ್ಪನಿಗೆ ನಾನು ಮತ್ತು ಪ್ರಕಾಶ್ ಎಂಬ ಗಂಡು ಮಕ್ಕಳು ಮತ್ತು ಆರು ಜನ ಹೆಣ್ಣು ಮಕ್ಕಳು ಎಂದರೆ ಸರಿ. ನಾನು ಮತ್ತು ನನ್ನ ಸಹೋದರ ಸಹೋದರಿಯರು ಚೆನ್ನಾಗಿದ್ದೇವೆ.

**2**. ದಾವಾ ಆಸ್ತಿ ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ.

**3**. ನನ್ನ ಸಹೋದರ ಮತ್ತು ಸಹೋದರಿಯರನ್ನು ಈ ಪ್ರಕರಣದಲ್ಲಿ ದುರುದ್ದೇಶದಿಂದ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ.

**4**. ಪ್ರತಿವಾದಿಯ ಅಣ್ಣ ತಿಮ್ಮಪ್ಪ ಎಂದರೆ ಸರಿ. ಸದರಿ ತಿಮ್ಮಪ್ಪ ಈಗ ಮೃತಪಟ್ಟಿರುತ್ತಾರೆ. ಸದರಿ ತಿಮ್ಮಪ್ಪನಿಗೆ ತನ್ನ ಹೆಂಡತಿ ಪಾರಮ್ಮ, ನಾಲ್ಕು ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಎಂದರೆ ಸರಿ.

**5**. ದಾವಾ ಆಸ್ತಿಗೆ ಸಂಬಂಧಿಸಿದಂತೆ ಖಾತೆ ಬದಲಾವಣೆ ಮಾಡಲು ಕಂದಾಯ ಇಲಾಖೆಗೆ ನಾನು ಯಾವುದೆ ಅರ್ಜಿ ಅಥವಾ ನೋಟೀಸನ್ನು ನೀಡಿಲ್ಲ. ನಾನು ಕಂದಾಯ ಇಲಾಖೆಯವರಿಗೆ ನೋಟೀಸ್ ನೀಡಿದೇ ಮತ್ತು ಅವರನ್ನು ಪಕ್ಷಗಾರರನ್ನಾಗಿ ಮಾಡದೇ ಕಂದಾಯ ಇಲಾಖೆಯವರ ವಿರುದ್ಧ ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

**6**. ದಾವಾ ಆಸ್ತಿ ಫಲವತ್ತಾದ ಜಮೀನು ಎಂದರೆ ಸರಿ. ದಾವಾ ಆಸ್ತಿಯಲ್ಲಿ ತೆಂಗಿನ ತೋಟ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಎರಡು ವರ್ಷಗಳ ಹಿಂದೆ ಒಂದು ಎಕರೆ ಜಮೀನಿನ ಮಾರುಕಟ್ಟೆ ಬೆಲೆ ಸುಮಾರು **15-20** ಲಕ್ಷ ಇತ್ತು ಎಂದರೆ ಸರಿ.

**7**. ದಾವಾ ಆಸ್ತಿ ಮತ್ತು ನಮ್ಮ ಕುಟುಂಬದ ಇತರ ಆಸ್ತಿಗಳು ನಮ್ಮ ಕುಟುಂಬದ ಮೂಲ ಪುರಷ ಗಿರಿಯಪ್ಪನಿಗೆ ಸೇರಿದ್ದು ಎಂದರೆ ಸರಿ. ಸದರಿ ಗಿರಿಯಪ್ಪನಿಗೆ ತಿಮ್ಮಪ್ಪ ಮತ್ತು ರಂಗಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ನಾನು ಸದರಿ ತಿಮ್ಮಪ್ಪನ ವಂಶಸ್ಥರು ಎಂದರೆ ಸರಿ. ಪ್ರತಿವಾದಿ ಸದರಿ ರಂಗಪ್ಪನ ವಂಶಸ್ಥರು ಎಂದರೆ ಸರಿ.

**8**. ಸದರಿ ಗಿರಿಯಪ್ಪನ ಪೌತಿಯ ನಂತರ ಸದರಿ ರಂಗಪ್ಪ ಮತ್ತು ತಿಮ್ಮಪ್ಪರವರು ತಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಗಿರಿಯಪ್ಪ

ದಿಃ 10.08.2023.

ಪೌತಿಯಾದ ನಂತರ ಸದರಿ ಗಿರಿಯಪ್ಪನ ಸ್ವತ್ತುಗಳು ಸದರಿ ಗಿರಿಯಪ್ಪನ ಮಕ್ಕಳಾದ ರಂಗಪ್ಪ ಮತ್ತು ತಿಮ್ಮಪ್ಪನ ಹೆಸರಿಗೆ ಬಂದಿರುತ್ತವೆ ಎಂದರೆ ಸರಿ. ನಂತರ ನನ್ನ ತಾತ ತಿಮ್ಮಪ್ಪ ಮೊದಲು ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ತಿಮ್ಮಪ್ಪ ತಮ್ಮ ಕುಟುಂಬದ ಹಿರಿಯ ಸದಸ್ಯನಾಗಿದ್ದರಿಂದ ನಮ್ಮ ಕುಟುಂಬದ ಆಸ್ತಿಗಳು ಮತ್ತು ದಾವಾ ಆಸ್ತಿ ಸದರಿ ತಿಮ್ಮಪ್ಪನ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತವೆ ಎಂದರೆ ಸರಿ.

**9**. ಸದರಿ ತಿಮ್ಮಪ್ಪ ಮತ್ತು ರಂಗಪ್ಪ ಪೌತಿಯಾದ ನಂತರ ನಮ್ಮ ಕುಟುಂಬದ ಆಸ್ತಿಗಳನ್ನು ಮತ್ತು ದಾವಾ ಆಸ್ತಿಯನ್ನು ಅವರ ವಾರಸುದಾರರು ಜಂಟಿ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿ.

**10**. ನಿಪಿ–**1** ನ್ನು ನನ್ನ ದೊಡ್ಡಪ್ಪ ಗಿರಿಯಪ್ಪ ಮೋಸದಿಂದ ನನ್ನ ಹೆಸರಿಗೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ಗಿರಿಯಪ್ಪನಿಗೆ ದಾವಾ ಆಸ್ತಿಯನ್ನು ಮತ್ತು ನಮ್ಮ ಕುಟುಂಬದ ದಾನ ಮಾಡುವ ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಸದರಿ ಗಿರಿಯಪ್ಪನಿಗೆ ಯಾವುದೇ ಮಕ್ಕಳಿರಲಿಲ್ಲ ಎಂದು ನುಡಿದಿರುತ್ತಾರೆ.

**11**. ನನ್ನ ದೊಡ್ಡಪ್ಪ ಗಿರಿಯಪ್ಪ ದಾವಾ ಆಸ್ತಿ ಮತ್ತು ನಮ್ಮ ಕುಟುಂಬದ ಇತರ ಆಸ್ತಿಗಳ ಕೇವಲ ಖಾತೆದಾರರಾಗಿದ್ದರೇ ಹೊರತು ಸಂಪೂರ್ಣ ಹಕ್ಕುದಾರರಾಗಿರಲಿಲ್ಲ ಎಂದರೆ ಸರಿಯಲ್ಲ.

**12**. ಸದರಿ ನಿಪಿ–**1** ನ್ನು ನನ್ನ ದೊಡ್ಡಪ್ಪ ಗಿರಿಯಪ್ಪ ನನಗೆ ಬರೆದುಕೊಟ್ಟಿರುವ ವಿಷಯ ಯಾರಿಗೂ ಗೊತ್ತಿಲ್ಲ ಎಂದರೆ ಸರಿಯಲ್ಲ.

**13**. ನಿಪಿ–**1** ನ್ನು ನನ್ನ ದೊಡ್ಡಪ್ಪ ಗಿರಿಯಪ್ಪ ನನ್ನ ಹೆಸರಿಗೆ ಮಾಡಿರುವ ವಿಷಯ ಪ್ರತಿವಾದಿಗೆ ಮತ್ತು ಅವರ ಸಹೋದರ ತಿಮ್ಮಪ್ಪನಿಗೆ **1975–76** ನೇ ಸಾಲಿನವರೆಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. **1975–76** ನೇ ಸಾಲಿನಲ್ಲಿ ಪ್ರತಿವಾದಿಯ ಅಣ್ಣ ತಿಮ್ಮಪ್ಪ ತಮ್ಮ ಕುಟುಂಬದ ಆಸ್ತಿಗಳ ಮೇಲೆ ಸಾಲ ಪಡೆಯುವ ಸಲುವಾಗಿ ದಾಖಲೆಗಳನ್ನು ತೆಗೆಸಿದಾಗ ನಿಪಿ–**1** ರ ಬಗ್ಗೆ ಪ್ರತಿವಾದಿಗೆ ಮತ್ತು ಪ್ರತಿವಾದಿಯ ಅಣ್ಣನಿಗೆ ತಿಳಿದಿರುತ್ತದೆ ಎಂದರೆ ಸರಿ. ನಂತರ ಪ್ರತಿವಾದಿ ಮತ್ತು ಪ್ರತಿವಾದಿ ಅಣ್ಣ ತಿಮ್ಮಪ್ಪ ತಮ್ಮ ಕುಟುಂಬದ ಆಸ್ತಿಗಳು ಮತ್ತು ದಾವಾ ಆಸ್ತಿಯನ್ನು ವಿಭಾಗ ಮಾಡಬೇಕೆಂದು ಕೇಳಿರುತ್ತಾರೆ.

**14**. ನಂತರ ನಮ್ಮ ಕುಟುಂಬದ ಎಲ್ಲಾ ಆಸ್ತಿಗಳು ಮತ್ತು ದಾವಾ ಆಸ್ತಿಗಳನ್ನು ನಿಪಿ–**2** ರಂತೆ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

**15**. ನಿಪಿ–**2** ರ ಪ್ರಕಾರ ಕಂದಾಯ ದಾಖಲೆಗಳು ಅವರವರ ಹೆಸರಿಗೆ ಬದಲಾವಣೆ ಆಗಿರುತ್ತವೆ ಎಂದರೆ ಸರಿ.

ದಿಃ 10.08.2023.

**16**. ನಿಪಿ–**2** ರ ಪ್ರಕಾರ ದಾವಾ ಆಸ್ತಿ ಪ್ರತಿವಾದಿ ಮತ್ತು ಪ್ರತಿವಾದಿಯ ಅಣ್ಣ ತಿಮ್ಮಪ್ಪನಿಗೆ ಬಂದಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರಿದು ಸದರಿ ನಿಪಿ–**2** ನ್ನು ಸೃಷ್ಟಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ–**2** ನ್ನು ಇಲ್ಲಿಯವರೆಗೆ ನಾನು ಪ್ರಶ್ನಿಸಿಲ್ಲ, ಸಾಕ್ಷಿ ಮುಂದುವರಿದು ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದುದ್ದರಿಂದ ಪ್ರಶ್ನಿಸಿಲ್ಲ ಎಂದು ನುಡಿದಿರುತ್ತಾರೆ.

**17**. ನಿಪಿ–**2** ರ ಪ್ರಕಾರ ಪ್ರತಿವಾದಿ ಮತ್ತು ಪ್ರತಿವಾದಿಯ ಅಣ್ಣ ಹಕ್ಕುದಾರರಾಗಿ **1999** ರವರೆಗೆ ಜಂತಿಯಾಗಿ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ.

**18**. ದಿಃ**05.05.1999** ರಂದು ಪ್ರತಿವಾದಿ ಮತ್ತು ಪ್ರತಿವಾದಿಯ ಅಣ್ಣ ತಿಮ್ಮಪ್ಪ ತಮ್ಮ ಕುಟುಂಬದ ಆಸ್ತಿಗಳನ್ನು ನೊಂದಾಯಿತ ವಿಭಾಗ ಪತ್ರದ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿಃ**05.05.1999** ರ ವಿಭಾಗ ಪತ್ರದ ಆಧಾರದ ಮೇಲೆ ದಾವಾ ಆಸ್ತಿ ಪ್ರತಿವಾದಿಯ ಹಕ್ಕು ಮತ್ತು ಸ್ವಾಧೀನಾನುಭವಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಿಃ**05.05.1999** ರಿಂದ ದಾವಾ ಆಸ್ತಿಯ ಸ್ವಾಧೀನಾನುಭವವನ್ನು ಪ್ರತಿವಾದಿಯೇ ಸ್ವಾಧೀನ ಇರುತ್ತಾನೆ ಎಂದರೆ ಸರಿಯಲ್ಲ. ನಂತರ ದಾವಾ ಆಸ್ತಿಯಲ್ಲಿ ಪ್ರತಿವಾದಿ ಒಂದು ಕೊಳವೆ ಬಾವಿಯನ್ನು ತೆಗೆಸಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಒಂದು ಕೊಳವೆ ಬಾವಿ ಇದೆ ಅದನ್ನು ನಾನೇ ತೆಗೆಸಿರುತ್ತೇನೆ. ದಾವಾ ಆಸ್ತಿಯಲ್ಲಿ ಕೊಳವೆ ಬಾವಿಯನ್ನು ಪ್ರತಿವಾದಿ ತೆಗೆಸಿದ್ದರು ಸಹಾ ನಾನು ತೆಗೆಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಹಳೇಯ ತೆಂಗಿನಮರಗಳು ಇದ್ದು, ಈಗ ಹೊಸ ತೆಂಗಿನಮರಗಳನ್ನು ಪ್ರತಿವಾದಿ ಹಾಕಿಸಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಒಂದು ಫಾರ್ಮ್ ಹೌಸ್ ಅನ್ನು ಪ್ರತಿವಾದಿ ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಒಂದು ಸೋಲಾರ್ ಪ್ಲಾಂಟ್ ಇರುತ್ತದೆ ಎಂದರೆ ಸರಿಯಲ್ಲ.

**19**. **1999** ರಿಂದ ಇಲ್ಲಿಯವರೆಗೆ ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಮತ್ತು ದಾವಾ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**20**. ದಾವಾ ಆಸ್ತಿಯ ಸುತ್ತ ತಂತಿಬೇಲಿಯನ್ನು ಪ್ರತಿವಾದಿ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ದಾವಾ ಆಸ್ತಿಗೆ ತಂತಿಬೇಲಿಯನ್ನು ನಾನೇ ಹಾಕಿಸಿರುತ್ತೇನೆ ಅದನ್ನು ಪ್ರತಿವಾದಿ ಹಾಳು ಮಾಡಿರುತ್ತಾನೆ ಎಂದು ನುಡಿದಿರುತ್ತಾರೆ.

**21**. ನಿಪಿ–**1** ರ ಕಾಲಕ್ಕೆ ನನ್ನ ಎರಡನೇ ದೊಡ್ಡಪ್ಪ ತಿಮ್ಮಪ್ಪ ಮೃತಪಟ್ಟಿದ್ದರು. ನಿಪಿ–**1** ರ ಕಾಲಕ್ಕೆ ಸದರಿ ನನ್ನ ಎರಡನೇ ದೊಡ್ಡಪ್ಪ ತಿಮ್ಮಪ್ಪನ ಹೆಂಡತಿ ಬದುಕಿದ್ದರು.

**22**. ನನ್ನ ದಾವಾದಲ್ಲಿ ತೋರಿಸಿರುವ ದಾವಾ ಆಸ್ತಿಯ ಚೆಕ್ಕುಬಂದಿ ಸುಳ್ಳಿನಿಂದ

ದಿಃ 10.08.2023.

ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯ ಸ್ವಾಧೀನಕ್ಕೆ ತೊಂದರೆ ಪಡಿಸಿದ ಕಾರಣ ಒಂದು ಪೊಲೀಸ್ ಕಂಪ್ಲೇಟ್ ಆಗಿರುತ್ತದೆ ಎಂದರೆ ಸರಿ.

**23**. ದಿಃ**16.06.2023** ರಲ್ಲಿ ಸದರಿ ಕ್ರಿಮಿನಲ್ ಪ್ರಕರಣದಲ್ಲಿ ನಾವು ರಾಜೀ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

**24**. ದಿಃ**19.06.2023** ರಂದು ದಾವಾ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯೊಂದಿಗೆ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ದಾವಾ ಆಸ್ತಿಯಲ್ಲಿರುವ ತೆಂಗಿನಮರವನ್ನು ಮತ್ತು ಕಲ್ಲುಕಂಬವನ್ನು ಪ್ರತಿವಾದಿ ಕಿತ್ತುಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ನಂತರ ಪ್ರತಿವಾದಿ ನಮ್ಮ ವಿರುದ, ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಯಾವುದೇ ಕಲ್ಲುಕಂಬವನ್ನು ಕಿತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಗಲಾಟೆ ಮಾಡಿದ ಬಗ್ಗೆ ಯಾವುದೇ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ ಅದನ್ನು ಪೊಲೀಸರು ನನ್ನ ದೂರನ್ನು ತೆಗೆದುಕೊಂಡಿಲ್ಲ ಎಂದು ನುಡಿದಿರುತ್ತಾರೆ.

**25**. ನಾನು **1977** ರಿಂದ ಇಲ್ಲಿಯವರೆಗೆ ದಾವಾ ಆಸ್ತಿಯಲ್ಲಿ ಎಂದೂ ಸ್ವಾಧೀನಾನುಭವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**26**. ನಾನು ದಾವಾ ಆಸ್ತಿಯ ಮಾಲೀಕನಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**27**. ಪ್ರತಿವಾದಿ ಬೆಂಗಳೂರಿನಲ್ಲಿ ವಾಸವಾಗಿದ್ದರೂ ಸಹಾ ತಮ್ಮ ಊರಿಗೆ ಬಂದು ಹೋಗುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರಿದು ದಾವಾ ಆಸ್ತಿಯಲ್ಲಿ ನಾವು ತೆಂಗಿನಗಿಡವನ್ನು ಹಾಕಿರುವುದು ಮತ್ತು ನಾವು ಸ್ವಾಧೀನಾನುಭವದಲ್ಲಿ ಇರುವುದನ್ನು ಸಹಾ ನೋಡಿರುತ್ತಾರೆ. ಪ್ರತಿವಾದಿಗೆ ಕೆಳಗಿನ ಕೊಟ್ಟಿಗೆ ಗ್ರಾಮದಲ್ಲಿ ಮನೆ ಇರುತ್ತದೆ ಎಂದರೆ ಸರಿ.

**28**. ದಾವಾ ಆಸ್ತಿಯಲ್ಲಿ ಪ್ರತಿವಾದಿ ಬೋರ್ ವೆಲ್ ಕೊರೆಸಿ ತೆಂಗಿನ ಸಸಿಗಳನ್ನು ಹಾಕಿಸಿರವುದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ.

**29**. ದಾವಾ ಆಸ್ತಿ ಹೆಚ್ಚು ಬೆಲೆ ಬಾಳುವ ಆಸ್ತಿಯಾಗಿರುವುದರಿಂದ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಪ್ರಮಾಣಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

ದಿಃ 10.08.2023.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಹೊಳಲ್ಕೆರೆ.